ಕರ್ನಾಟಕ ಸರ್ಕಾರ

ಸಂಖ್ಯೆ: ಉತಇ/ತ/ಲೆಪವಿ/ಮ.ಸ-1ಎ/ಖ.ವೆ/2008-09

ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ
ಕೌಶಲ್ಯ ಭವನ, ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-29
ದಿನಾಂಕ: 19-12-2008

## ಸುತ್ತೋಲೆ

ವಿಷಯ:-ಲೆಕ್ಕಪತ್ರ ವಿಭಾಗಕ್ಕೆ ಪ್ರತಿ ತಿಂಗಳ ಯೋಜನೆ/ಯೋಜನೇತರ ಮಾಸಿಕ ವೆಚ್ಚದ ವರದಿ ಮತ್ತು ರಾಜ್ಯಾದಾಯ ಜಮೆಯ ವರದಿಗಳನ್ನು ಸಲ್ಲಿಸುವ ಬಗ್ಗೆ.

<>>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಆಯಾ ಸಾಲಿನ ಆರ್ಥಿಕ ವರ್ಷದಲ್ಲಿ ಯೋಜನೆ/ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಭರಿಸಲಾಗಿರುವ ಮಾಸಿಕ ವೆಚ್ಚದ ವರದಿ ಮತ್ತು ರಾಜಸ್ವ ಜಮೆಯ ವಿವರಗಳನ್ನು ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಲೆಕ್ಕಪತ್ರ ವಿಭಾಗಕ್ಕೆ ತಪ್ಪದೆ ಸಲ್ಲಿಸುವುದು ಸಂಬಂಧಿಸಿದ ಪ್ರಾಚಾರ್ಯರು/ ಬಟವಾಡೆ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ಈ ಹಿಂದೆ ಹಲವು ಬಾರಿ ಈ ಬಗ್ಗೆ ಸೂಚನೆ, ನಿರ್ದೇಶನಗಳನ್ನು ನೀಡಲಾಗಿದ್ದರೂ ಸಹ ಮಾಸಿಕ ಯೋಜನೆ/ಯೋಜನೇತರ ವೆಚ್ಚದ ವಿವರಗಳ ಪಟ್ಟಿಯನ್ನು ಗಮನಿಸಲಾಗಿ ಕೆಲವು ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರುಗಳು ಯೋಜನೆ/ಯೋಜನೇತರ ಮಾಸಿಕ ವೆಚ್ಚದ ವಿವರ ಹಾಗೂ ರಾಜ್ಯಾದಾಯ ಜಮೆಯ ವಿವರಗಳ ಪಟ್ಟಿಯನ್ನು ಲೆಕ್ಕಪತ್ರ ವಿಭಾಗಕ್ಕೆ ಪ್ರತಿ ತಿಂಗಳು ತಡವಾಗಿ ಕಳುಹಿಸಿಕೊಡುತ್ತಿರುವುದು ಹಾಗೂ ಹಲವಾರು ಕೈ.ತ.ಸಂ.ಗಳ ಪ್ರಾಚಾರ್ಯರು(ಪ್ರಮುಖವಾಗಿ ಯೋಜನೆಗೆ ಸಂಬಂಧಿಸಿದಂತೆ) ವೆಚ್ಚದ ವಿವರ ಹಾಗೂ ಜಮೆಯ ವಿವರಗಳನ್ನು ಕಳುಹಿಸಿಕೊಡುತ್ತಿಲ್ಲ. ಇದರಿಂದ ಸರ್ಕಾರಕ್ಕೆ ಪ್ರತಿ ತಿಂಗಳು ಕ್ರೋಢೀಕೃತ ಮಾಹಿತಿ ಸಲ್ಲಿಸುವಲ್ಲಿ ವಿಳಂಬವಾಗುತ್ತಿದೆ. ಆದ್ದರಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಯೋಜನೇತರ ಹಾಗೂ ಯೋಜನೆ ಅಡಿಯಲ್ಲಿರುವ ಎಲ್ಲಾ ಲೆಕ್ಕ ಶೀರ್ಷಿಕೆಗಳಿಗೂ ಪ್ರತ್ಯೇಕವಾಗಿ ಭರಿಸಲಾದ ವೆಚ್ಚದ ಅಂಕಿ ಅಂಶಗಳ ವಿವರಗಳನ್ನು ಹಾಗೂ ರಾಜ್ಯಾದಾಯ ಜಮೆಯ ವಿವರಗಳನ್ನು ಲೆಕ್ಕಪತ್ರ ವಿಭಾಗಕ್ಕೆ ಸಲ್ಲಿಸುವುದು. ಆಯಾ ಕೈ.ತ.ಸಂಗಳಿಗೆ ಸಂಬಂಧಿಸಿದ ಯೋಜನೆ/ ಯೋಜನೇತರ ಲೆಕ್ಕಶೀರ್ಷಿಕೆಗಳಲ್ಲಿ ವೆಚ್ಚಗಳನ್ನು ಭರಿಸದೆ ಇದ್ದರೂ 'ಶೂನ್ಯ' ಎಂದು ಮತ್ತು ಯಾವುದೇ ರಾಜ್ಯಾದಾಯ ಜಮೆಯು ಇಲ್ಲದಿದ್ದಲ್ಲಿ ಶೂನ್ಯ ಎಂದು ವರದಿಯನ್ನು ತಪ್ಪದೇ ಸಲ್ಲಿಸುವುದು. ಈ ಸುತ್ತೋಲೆ ತಲುಪಿದ ನಂತರವೂ ಕ್ರಮಬದ್ಧವಾಗಿ ಮಾಸಿಕ ವೆಚ್ಚದ ವಿವರಗಳು ಹಾಗೂ ರಾಜ್ಯಾದಾಯ ಜಮೆಯ ವಿವರಗಳ ಪಟ್ಟಿಯನ್ನು ಸಲ್ಲಿಸದೆ ಇದ್ದಲ್ಲಿ ಮುಂಬರುವ ದಿನಗಳಲ್ಲಿ ಮೇಲು ಸಹಿಗಾಗಿ ಸಲ್ಲಿಸುವ ಎಲ್ಲಾ ಬಿಲ್ಲುಗಳನ್ನು ತಡೆಹಿಡಿಯಲಾಗುವುದು ಹಾಗೂ ಅಂತಹ ಪ್ರಾಚಾರ್ಯರ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ಎಚ್ಚರಿಸಲಾಗಿದೆ.

ಆಯುಕ್ತರು
ಉದ್ಯೋಗ ಮತ್ತು ತರಬೇತಿ

ಇವರಿಗೆ,

ಪ್ರಾಚಾರ್ಯರು,
ಕೈಗಾರಿಕಾ ತರಬೇತಿ ಸಂಸ್ಥೆ, ಮುಂಡಗೋಡ

ಜಂಟಿ ನಿರ್ದೇಶಕರು(ತರಬೇತಿ)
ವಿಭಾಗೀಯ ಕಛೇರಿ, ಬೆಂಗಳೂರು/ಗುಲ್ಬರ್ಗ/ಹುಬ್ಬಳ್ಳಿ/ಮೈಸೂರು